ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು **ಪ್ರಥಮ ದರ್ಜೆಯ ನ್ಯಾಯಿಕ**
**ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**
**ಸಿ.ಸಿ. ನಂ. 1292/2023**

ಚಾಸಾ - **4**
**ಪ್ರಾ.ಸಾ. - 3**

**ಸಾಕ್ಷಿದಾರರ ಹೆಸರು** : ದೊಡ್ಡಪ್ಪ ಕಲ್ಲಪ್ಪ ದೇಯಣ್ಣವರ

**ಸಾಕ್ಷಿದಾರರ ವಯಸ್ಸು** : **49** ವರ್ಷ

**ಸಾಕ್ಷಿದಾರರ ಉದ್ಯೋಗ**: ಪೋಲಿಸ ಪೇದೆ

**ಸಾಕ್ಷಿದಾರರ ವಿಳಾಸ** : ಸಿ ಇ ಎನ್ ಪೋಲಿಸ ಠಾಣೆ ಬೆಳಗಾವಿ

**ಪ್ರಮಾಣ ವಚನ ಮಾಡಿದ ದಿನಾಂಕ : 25.02.2025.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ**

ದಿಃ **30.07.2022** ರಂದು ಚಾಸಾ **1** ರವರೊಂದಿಗೆ ಸರ್ಕಾರಿ ವಾಹನ ಕೆ ಎ **22** ಜಿ **1175** ರಲ್ಲಿ ಅಕ್ರಮ ಚಟುವಟಿಕೆಗಳ ಮಾಹಿತಿ ಸಂಗ್ರಯ ಕುರಿತು ಬೈಲಹೊಂಗಲದ ಶಹರದಲ್ಲಿದ್ದಾಗ ಚಾಸಾ **1** ರವರಿಗೆ ಮರ್ಡಿನಾಗಲಾಪೂರ ಗ್ರಾಮಪಂಚಾಯತಿಯ ಹತ್ತಿರ ಅಕ್ರಮ ಮಧ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿರುತ್ತದೆ. ಕೂಡಲೇ ನಾವು ಬೈಲಹೊಂಗಲ ಪೊಲೀಸ ಠಾಣೆಗೆ ಹೋಗಿ, ಚಾಸಾ **1** ರವರು ನನಗೆ ಇಬ್ಬರೂ ಪಂಚರನ್ನು ಹಾಜರುಪಡಿಸಿಸಲು ತಿಳಿಸಿದರು. ಅದರಂತೆ ಚಾಸಾ **2** ಮತ್ತು **3** ರವರನ್ನು ಚಾಸಾ **1** ರವರ ಬಳಿ ಹಾಜರುಪಡಿಸಿದೇನು. ಚಾಸಾ **1** ರವರು ಚಾಸಾ **2** ಮತ್ತು **3** ರವರಿಗೆ ವಿಷಯ ತಿಳಿಸಿದರು. ಠಾಣೆಯಲ್ಲಿರುವ ತನಿಖಾ ಸಾಮಗ್ರಿಗಳನ್ನು ತೆಗೆದುಕೊಂಡು ಹಾಗೂ ಇಬ್ಬರು ಪಂಚರನ್ನು ಕರೆದುಕೊಂಡು ಸರ್ಕಾರಿ ವಾಹನದಲ್ಲಿ **11.15** ಗಂಟೆಗೆ ನಾವು ಮರ್ಡಿನಾಗಲಾಪೂರ ಗ್ರಾಮಕ್ಕೆ **11.55** ಗಂಟೆಗೆ ಹೋದೇವು. ಅಲ್ಲಿ ದೂರದಲ್ಲಿ ವಾಹನವನ್ನು ನಿಲ್ಲಿಸಿ ಮುಂದೆ ಹೋಗಿ ನೋಡಿದಾಗ ಗ್ರಾಮಪಂಚಾಯತಿಯ ಹತ್ತಿರ ಮೋಟಾರ ಸೈಕಲ ಮೇಲೆ ರಟ್ಟಿನ ಬಾಕ್ಸನಲ್ಲಿ ಮಧ್ಯವನ್ನು ಮಾರಾಟ ಮಾಡುತ್ತಿರುವುದು ಕಂಡು ಬಂತು. ಮಧ್ಯವನ್ನು ಖರೀದಿಸಲು ಜನರು ಸಹ ಇದ್ದರು. **12.00** ಗಂಟೆಗೆ ಸರಿಯಾಗಿ ನಾವೆಲ್ಲರೂ ದಾಳಿ ಮಾಡಿದೇವು. ಖರೀದಿ ಮಾಡಲು ಬಂದರು ಓಡಿ ಹೋದರು ಮಾರಾಟ ಮಾಡುವವನು ಸಿಕ್ಕಿಹಾಕಿಕೊಂಡನು. ಪಂಚರ ಸಮಕ್ಷಮ ಆತನ ಹೆಸರು ಕೇಳಲಾಗಿ ಆತನು ತನ್ನ ಹೆಸರು ಬಾಳೇಶ ಸಿದ್ದಪ್ಪ ಬೂತನವರ, ವಯಸ್ಸು **49,** ಜಾತಿ ಕುರುಬರ ಹಾಗೂ ಸಾಃ ಮರ್ಡಿನಾಗಲಾಪೂರ ಎಂದನು. ಅವನ ಬಳಿ ಇದ್ದ ಮಾಲನ್ನು ನೋಡಿದಾಗ **90** ಎಂ ಎಲ್ **38** ಓರಿಜನಲ್ ಚೊಯ್ಸ ಇದ್ದವು. **90** ಎಂ ಎಲ್ ಹೈ ವರ್ಟ್ಸ ವಿಸ್ಕಿ **18** ಪ್ಯಾಕೇಟಗಳು ಇದ್ದವು. ಒಂದು ಹಿರೋ ಇಂಟರಗೇಟ್ ಮೋಟಾರ ಸೈಕಲ ನಂಬರ ಇತ್ತು. ಅವನ ಬಳಿ **1920/-**ರೂ ನಗದು ಇದ್ದವು ಹಾಗೂ ರಟ್ಟಿನ ಬಾಕ್ಸ ಇತ್ತು. ಪಂಚರ ಸಮಕ್ಷಮ ಅವುಗಳಲ್ಲಿ **2** ಪ್ಯಾಕೇಟಗಳನ್ನು ಸ್ಯಾಂಪಲ ತೆಗೆದುಕೊಂಡೆವು. ಅವುಗಳನ್ನು ಪ್ಯಾಕ ಮಾಡಿ ಸಿಲ್ ಮಾಡಿದೇವು. ಆತನನ್ನು ಎಲ್ಲಿಂದ ಮಧ್ಯವನ್ನು ತರುತ್ತೀರಿ ಎಂದು ಕೇಳಿದಾಗ ಆತ

ಕೊಲ್ಲಾಪೂರ ಸರ್ಕಲನಲ್ಲಿನ ನಿಧಿ ಬಾರ್ ಆ್ಯಂಡ್ ರೆಸ್ಟೊರೇಂಟ್ ನಿಂದ ತುರತ್ತೇನೆ ಎಂದು ಹೇಳಿದನು. ಮಾರಾಟ ಮಾಡಲು ಪರವಾಣಿಗೆ ಇಲ್ಲ ಎಂದು ಹೇಳಿದನು. ಚಾಸಾ 1 ರವರು ಸರ್ಕಾರಿ ಸರ್ಪಿ ದೂರನ್ನು ನೀಡುವರು. ಆರೋಪಿಯನ್ನು ನೋಡಿ ಗುರುತಿಸುವರು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಃ**

ಚಾಸಾ 1 ರವರು ನನ್ನ ಮೇಲಾಧಿಕಾರಿ ಎಂದರೆ ಸರಿ. ನಾವು ಬೆಳಗಾವಿಯಲ್ಲಿ ಕರ್ತವ್ಯ ನಿರ್ವಹಿಸುತ್ತೇವೆ. ಬೆಳಗಾವಿಯಿಂದ ಬೈಲಹೊಂಗಲಕ್ಕೆ ಬರಬೇಕಾದರೆ ಮರ್ಡಿನಾಗಲಾಪೂರ ದಾಟಿ ಬರುತ್ತೀರಿ ಎಂದರೆ ಸಾಕ್ಷಿ ಊರು ಒಳಗಡೆ ಇರುತ್ತದೆ ನಾವು ಮುಖ್ಯ ರಸ್ತೆಯ ಮೇಲೆ ಬರುತ್ತೇವೆ. ಬೆಳಗಾವಿಯಿಂದ ಬೈಲಹೊಂಗಲಕ್ಕೆ ಬರಬೇಕಾದರೆ ಮರ್ಡಿನಾಗಲಾಪೂರ ಮುಖ್ಯ ಕ್ರಾಸ್ ಬರುತ್ತದೆ ಎಂದರೆ ಸರಿ.

ಬಾತ್ಮಿಯು ಚಾಸಾ 1 ರವರಿಗೆ ಬಂದಿರುತ್ತದೆ. ಚಾಸಾ 1 ರವರು ನನಗೆ ಹೇಳಿದಾಗ ಸಮಯ 11.15 ಗಂಟೆಯಾಗಿತ್ತು. ಸದರಿ ವಿಷಯ ನನಗೆ ಹೇಳಿದಾಗ ನಾನು ಬೈಲಹೊಂಗಲದ ಬಸ್ ನಿಲ್ದಾಣದ ಬಳಿ ಇದ್ದೇನು. ನನ್ನ ಹೇಳಿಕೆಯಲ್ಲಿ ಬೈಲಹೊಂಗಲ ಬಸ್ ನಿಲ್ದಾಣದ ಬಳಿ ಇದ್ದ ಬಗ್ಗೆ ಬರೆಸಿರುವುದಿಲ್ಲ, ಬೈಲಹೊಂಗಲದ ಶಹರದಲ್ಲಿ ಇದ್ದೇನು ಎನ್ನುತ್ತಾರೆ. ಸದರಿ ವಿಷಯವನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೀರಿ ಎಂದರೆ ಸರಿ. ಬೈಲಹೊಂಗಲದಿಂದ ಮರ್ಡಿನಾಗಲಾಪೂರಕ್ಕೆ ಹೋಗಲು 25 ನಿಮಿಷ ಹೋಗಲು 25 ನಿಮಿಷ ಬರಲು ಬೇಕಾಗುತ್ತದೆ ಎಂದರೆ ಸಾಕ್ಷಿ ಹೋಗಲು 25 ನಿಮಿಷ ಆಗಿರುತ್ತದೆ ಬರಲು ಎಷ್ಟು ಹೊತ್ತು ಆಗಿರುತ್ತದೆ ಎಂದು ಹೇಳಲಾಗುವುದಿಲ್ಲ, ಸಂಚಾರಿ ದಟ್ಟಣೆಯ ಮೇಲೆ ನಿರ್ಧಾರವಾಗುತ್ತದೆ. ಚಾಸಾ 1 ರವರು ನನಗೆ ಹೇಳಿದಾಗ ಸಮಯ 11.15 ಗಂಟೆಯಾಗಿತ್ತು. ನಾನು ಪಂಚರನ್ನು ಬಸ ನಿಲ್ದಾಣದಿಂದಲೇ ಕರೆದುಕೊಂಡು ಬಂದಿರುತ್ತೇನೆ. ಸದರಿ ವಿಷಯವನ್ನು ನನ್ನ ಹೇಳಿಕೆಯಲ್ಲಿ ಬರೆಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಘಟನಾ ಸ್ಥಳದಿಂದ ವಾಹನವನ್ನು 5 ರಿಂದ 10 ನಿಮಿಷ ಹಾದಿ ದೂರದಲ್ಲಿ ನಿಲ್ಲಿಸಿದೇವು. ಘಟನಾ ಸ್ಥಳದಲ್ಲಿ ಎಷ್ಟು ಜನ ಇದ್ದರೂ ಎಂದರೆ ಸಾಕ್ಷಿ ಸುಮಾರು ಜನರು ಕೂಡಿದ್ದರು, ಎಣಿಸಲಿಲ್ಲ ಎನ್ನುತ್ತಾರೆ. ನಾವು ಅಲ್ಲಿ ಇದ್ದವರನ್ನು ಹಿಡಿಯಲು ಪ್ರಯತ್ನ ಮಾಡಿದೇವು ಅವರು ಸಿಗಲಿಲ್ಲ ಎನುತ್ತಾರೆ. ಆರೋಪಿ ಮಾತ್ರ ಸಿಕ್ಕಿರುತ್ತಾರೆ. ಬೆನ್ನು ಹತ್ತಿರುವ ವಿಷಯವನ್ನು ಹೇಳಿಕೆಯಲ್ಲಿ ಬರೆಸಿರುತ್ತೀರಾ ಎಂದರೆ ಸಾಕ್ಷಿ ಓಡಿ ಹೋದರು ಎಂದು ಬರೆಸಿರುತ್ತೇವೆ ಎನ್ನುತ್ತಾರೆ. ಓಡಿ ಹೋದವರ ಬಗ್ಗೆ ಸ್ಥಾನಿಕವಾಗಿ ವಿಚಾರಿಸಿರುತ್ತೇವೆ ಯಾರು ಹೇಳಿರುವುದಿಲ್ಲ. ಅಲ್ಲಿ ದೂರ ನಿಂತವರನ್ನು ಕೇಳಿದೇವು ಅವರು ಓಡಿ ಹೊದವರು ಯಾರು ಗೊತ್ತಿಲ್ಲ ಎನ್ನುತ್ತಾರೆ. ಸದರಿ ವಿಷಯವನ್ನು ನ್ಯಾಯಾಲಯದಲ್ಲಿ ಮೊದಲ ಬಾರಿಗೆ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಾನು ಸ್ಥಾನಿಕವಾಗಿ ಅಲ್ಲಿದ್ದವರನ್ನು ಓಡಿ ಹೋದವರ ಬಗ್ಗೆ ವಿಚಾರ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಓರಿಜನಲ್ ಚೊಯ್ಸ ವಿಸ್ಕಿ ಹಾಗೂ ಹೆವರ್ಟ್ಸ್ ವಿಸ್ಕಿಯ ಮ್ಯಾನಿಫೆಕ್ಚರಿಂಗ್ ದಿನಾಂಕ ಹಾಗೂ ಎಕ್ಸಪೈರಿ ಡೇಟ್ ಹೇಳಲಾಗುವುದಿಲ್ಲ. ಆರೋಪಿ ಕಡೆಯಿಂದ ಜಪ್ತಿ ಮಾಡಿದ್ದಿರಿ ಎಂದು ಹೇಳಲಾದ **1920/-** ರೂಗಳ ಮುಖಬೆಲೆ ಹೇಳಲಾಗುವುದಿಲ್ಲ . ಪಂಚರ ಹೆಸರನ್ನು ನನ್ನ ಹೇಳಿಕೆಯಲ್ಲಿ ಬರೆಸಿರುತ್ತೇನೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನದಂದು ಚಾಸಾ **1** ರವರಿಗೆ ಬಾತ್ಮಿ ಬಂದಿರುತ್ತದೆ ಹಾಗೂ ಚಾಸಾ **1** ರವರು ನಿಮಗೆ ಬಾತ್ಮಿ ಬಂದ ವಿಷಯ ತಿಳಿಸಿ ಪಂಚರನ್ನು ಕರೆದುಕೊಂಡು ಬರಲು ತಿಳಿಸಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಪಂಚರನ್ನು ಕರೆದುಕೊಂಡು ಬಂದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಮರ್ಡಿನಾಗಲಾಪೂರ ಗ್ರಾಮಪಂಚಾಯತಿ ಹತ್ತಿರ ಆರೋಪಿ ಅಕ್ರಮವಾಗಿ ವಾಹನದ ಮೇಲೆ ಮದ್ಯ ಮಾರಾಟ ಮಾಡುತ್ತಿದ್ದ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆತನ ಹೆಸರು ಬಾಳೇಶ ಸಿದ್ದಪ್ಪ ಬೂತನವರ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆತನ ಬಳಿ ಓರಿಜನಲ್ ಚೊಯ್ಸ ವಿಸ್ಕಿ **38** ಟೇಟ್ರಾ ಪ್ಯಾಕೇಟ **90** ಎಂ ಎಲ್ ಹಾಗೂ ಹೈವರ್ಟ್ಸ್ ಚಿಸ್ ವಿಸ್ಕಿ **90** ಎಂ ಎಲ್ **18** ಟೆಟ್ರಾ ಪ್ಯಾಕೆಟಗಳನ್ನು ಜಪ್ತಿ ಮಾಡಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯಿಂದ **1920/-** ರೂಗಳನ್ನು ಜಪ್ತಿ ಮಾಡಿರುವುದು ಸುಳ್ಳು ಎಂದರೆ ಸರಿಯಲ್ಲ. ಆತನಿಂದ ಮೋಟಾರ ಸೈಕಲ ಜಪ್ತಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆಗ **2** ಟೇಟ್ರಾ ಪ್ಯಾಕೇಟಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪಡೆದುಕೊಂಡಿರುವುದು ಸುಳ್ಳು ಎಂದರೆ ಸರಿಯಲ್ಲ. ಆತನನ್ನು ವಿಚಾರಿಸಿದಾಗ ಮದ್ಯವನ್ನು ಬೆಳಗಾವಿಯ ಕೊಲ್ಲಾಪೂರ ನಿಧಿ ಬಾರನಿಂದ ತಂದಿರುತ್ತೇನೆ ಎಂದು ಹೇಳಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಠಾಣೆಯ ಅಂಕಿಅಂಶದ ಸಲುವಾಗಿ ಸುಳ್ಳು ದೂರು ದಾಖಲಿಸಿ ಅದಕ್ಕೆ  ಪೂರಕವಾಗಿ  ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಪ್ರಥಮತಾ ನ್ಯಾಯಾಲಯಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಹೇಳಿದ ರೀತಿ ಮದ್ಯ ಜಪ್ತಿ ಮಾಡಿದ್ದೀರಿ ಎಂದು ಹೇಳಲಾಗ ಮದ್ಯಕ್ಕು ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಯಾವುದೇ ದಾಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ..ದಂ.ನ್ಯಾ..ಬೈಲಹೊಂಗಲ